# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ.ಕಾ.ನಿ.ಅ/ಶ್ರೀರಾಮ/ಪಿಆರ್/ /22-23

ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು,
ಪ್ರಕಾಶನಗರ, ವಾರ್ಡ್ ಮಟ್ಟದ ಸಮಿತಿ
ಪ್ರಕಾಶನಗರ, ವಾರ್ಡ್ ಸಂ.140
ಬೆಂಗಳೂರು, ದಿನಾಂಕ: 03/11/2022

**ದಿನಾಂಕ: 19/10/2022 ರಂದು ಬೆಳ್ಳಗ್ಗೆ 11.00 ಗಂಟೆಗೆ ನಡೆದ ಸಭಾ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು.**

**ಸಭೆಗೆ ಹಾಜರಿದ್ದ ವಾರ್ಡ್ ಕಮಿಟಿ ಅಧಿಕಾರಿ/ಸದಸ್ಯರು :**

1. ಶ್ರೀ ಕೆ.ಪಿ ಯೋಗೇಶ್ ಸ.ಕಾ.ನಿ.ಅ ಹಾಗೂ ನೋಡೆಲ್ ಅಧಿಕಾರಿ
2. ಕುಮಾರಿ।। ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು
3. ಶ್ರೀ ಲಕ್ಷ್ಮೀನಾರಾಯಣ.ಆರ್ ಬಿ.ಜೆ.ಪಿ
4. ಶ್ರೀ ವಸಂತ್‌ಕುಮಾರ್ ಬಿ.ಜೆ.ಪಿ
5. ಶ್ರೀ ಜಿ ದಿನೇಶ್ ಕುಮಾರ್ ಎಎಪಿ
6. ಶ್ರೀ ನಾಗರಾಜು ಸಿ.ಆರ್.ಎ.ಎಸ್.ಐ
7. ಶ್ರೀ ಪದ್ಮನಾಭ ಸದಸ್ಯರು / ಸಾರ್ವಜನಿಕರು
8. ಶ್ರೀ ಅಂಬರೀಶ್ ಎಂ.ಜಿ ಮಾರ್ಷಲ್
9. ಶ್ರೀ ರವಣಯ್ಯ ಕಿರಿಯ ಆರೋಗ್ಯ ಪರಿವೀಕ್ಷಕರು.
10. ಶ್ರೀ ಹನುಮಂತ್ ರಾವ್
11. ಶ್ರೀ ರವಿಕುಮಾರ್
12. ಶ್ರೀ ಗೋಪಿ.ವಿ
13. ಶ್ರೀ ಎಂ ಮಹೇಶ್ ವಾರ್ಡ್ ಸಂ. 140 ಕಂದಾಯ ವಸೂಲಿದಾರರು
14. ಶ್ರೀ ವೈಜಿನಾಥ್ ಎಂ ಪಾಟೀಲ್ ಸಹಾಯಕ ಅಭಿಯಂತರರು

ಸಹಾಯಕ ಅಭಿಯಂತರರು ಕಾರ್ಯದರ್ಶಿ ಮತ್ತು ಸಂಚಾಲಕರು, ಸ.ಅ, ವಾರ್ಡ್ ಸಂ.140 (ಹಳೆ ನಂ.98) ವಾರ್ಡ್ ಸಮಿತಿಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲು ತಿಳಿಸಿದರು. ಸಭೆಯಲ್ಲಿ ಹಾಜರಿದ ಸದಸ್ಯರು ಹಾಗು ಪಾಲಿಕೆಯ ಅಧಿಕಾರಿಗಳು ತಮ್ಮ ಪರಿಚಯ ನೀಡಿ ಸಭೆಯನ್ನು ಪ್ರಾರಂಭಿಸಲಾಯಿತ್ತು.

1. ಅರಣ್ಯ ಇಲಾಖೆಯವರಿಂದ 5 ಮರಗಳ ರೆಂಬೆ, ಕೊಂಬೆಗಳು ಕತ್ತರಿಸಲು ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.

2. ವಾರ್ಡ್ ವ್ಯಾಪ್ತಿಯಲ್ಲಿ Jio cable ರವರ ರಸ್ತೆಗಳಲ್ಲಿ ಗುಂಡಿ ತೆಗೆದಿದ್ದು, ಹಾಗೂ ಅವರು ಕಟ್ಟುವ ಛೇಂಬರ್ ರಸ್ತೆಗೆ ಸಮತಟ್ಟಗಿಲ್ಲ ಸ್ವಲ್ಪ ಎತ್ತರವಾಗಿದೆ ವಾಹನ ಚಾಲಕರಿಗೆ ಹಾಗೂ ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ಸದಸ್ಯರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಗುಂಡಿಗಳನ್ನು ಬೇಗನೆ ದುರಸ್ಥಿಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದರು ಹಾಗೂ ಛೇಂಬರ್ ವಿಷಯದ ಬಗ್ಗೆ ಚರ್ಚಿಸಿದರು.

2-

Scanned with OKEN Scanner

3. ವಾರ್ಡ್‌ಸಂಖ್ಯೆ. 140 (ಹಳೆ ನಂ.98) ವ್ಯಾಪ್ತಿಗೆ ಬರುವ ಕೋಂದಡಸ್ವಾಮಿ ದೇವಸ್ಥಾನ 6ನೇ ಅಡ್ಡರಸ್ತೆ ಹಾಗೂ ಸುತ್ತ ಮುತ್ತಲಿನಲ್ಲಿ ರಸ್ತೆ ಗುಂಡಿ ಮುಚ್ಚಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
4. ಬಿಡಬ್ಲ್ಯೂಎಸ್‌ಎಸ್‌ಬಿ ರವರು ರಸ್ತೆ ಗುಂಡಿಗಳು ಹೆಚ್ಚಾಗಿದ್ದು, ಅದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಬೇಗನೆ ದುರಸ್ಥಿಗೊಳಿಸಲು ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದರು.
5. ಸಭೆಗೆ ಹಾಜರಾಗದ ಇತರೆ ಇಲಾಖೆ ಅಧಿಕಾರಿಗಳಿಗೆ ನೋಟಿಸ್ ನೀಡಬೇಕು ಎಂದು ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.
6. ವಾರ್ಡ್ ವ್ಯಾಪ್ತಿಯಲ್ಲಿ ಬರುವ 7ನೇ ಮುಖ್ಯರಸ್ತೆ, ಪ್ರಕಾಶನಗರ ಕಾನೂನು ಬಾಹಿರ ಚಟುವಟಿಕೆಗಳ ಸಂಶಯ ಬಂದಿರುವುದರಿಂದ ಸಂಬಂಧಪಟ್ಟ ಪೊಲೀಸ್ ಇಲಾಖೆಗೆ ತಿಳಿಸಿ, ಸದರಿ ವಿಷಯ ಹಾಗೂ ಸ್ಥಳದ ಬಗ್ಗೆ ಕುರಿತು ಸಭೆಗೆ ತಿಳಿಸಿದಾಗ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.
7. ಸುಮತಿ ಕಲ್ಯಾಣ ಮಂಟಪದ ಎದುರು ಬರುವ ಡ್ರೈನೇಜ್ ನೀರು ಬ್ಲಾಕ್ ಆಗಿದ್ದು, ಸರಗವಾಗಿ ಹೋಗದೆ ರಸ್ತೆಯ ಬದಿಯಲ್ಲಿ ನಿಂತಿರುವುದಾಗಿ ಸಾರ್ವಜನಿಕರು ಸಭೆಗೆ ತಿಳಿಸಿದಾಗ ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.
8. ವಾರ್ಡ್ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಕಛೇರಿಯಲ್ಲಿ ಹೊಸದಾಗಿ ವಾರ್ಡ್ ಸಮಿತಿಯನ್ನು ನಡೆಸಲು ಇನ್ನೊಂದು ಕೊಠಡಿಯನ್ನು ನಿರ್ಮಿಸುವಂತೆ ಸಾರ್ವಜನಿಕರು ಸಭೆಗೆ ತಿಳಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.
9. ವಾರ್ಡ್ ವ್ಯಾಪ್ತಿಗೆ ಬರುವ ಎಲ್ಲಾ ಕಡೆಗಳಲ್ಲಿ ಸಿಸಿಟಿವಿ ಕ್ಯಾಮರಗಳು ರಿಪೇರಿ ಕಾರ್ಯದ ವಿಷಯವಾಗಿ ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿರುವುದರಿಂದ ಸದರಿ ಕ್ಯಾಮಾರಗಳನ್ನು ದುರಸ್ಥಿಪಡಿಸಲು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದಾಗ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಿದರು.

ಮುಂದುವರೆದಂತೆ, ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಇಂಜಿನಿಯರ್ ಆದ ಕುಮಾರಿ॥ ಹಿತೈಷಿಣಿ.ಎಸ್ ಸಹಾಯಕ ಅಭಿಯಂತರರು ರವರು ಎಲ್ಲಾರಿಗೂ ವಂದಿಸಿ ಸಭೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ,**

Hithaishini S

**ಕಾರ್ಯದರ್ಶಿ** /AE

**ವಾರ್ಡ್ ಸಂ.140**

Scanned with OKEN Scanner